# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406
ಮೈಸೂರು-570 005

ವಿಷಯ: ಡಾ. ಎಂ. ಮಹೇಂದ್ರ, ಸಹ ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಜಿಎಸ್‌ಟಿ ಅನುದಾನದ K-FIST (L2) ಸ್ಕೀಂ ಅಡಿಯಲ್ಲಿ ಕೈಗೊಂಡಿರುವ ಯೋಜನೆಗೆ ಮೊದಲ ಕಂತಿನಲ್ಲಿ ಬಿಡುಗಡೆಗೊಂಡ ಅನುದಾನವನ್ನು ಶೀರ್ಷಿಕೆವಾರು ವಿನಿಯೋಗಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1. ಕೆಸ್ಟೆಪ್ಸ್, ಬೆಂಗಳೂರು ಇವರ ಮಂಜೂರಾತಿ ಪತ್ರ ಸಂಖ್ಯೆ: KSTEPS/VGST/2022-23/K-FIST L2/GRD-1133/37/2024-25/34, ದಿನಾಂಕ: 13/6/2024.

2. ಅಧ್ಯಕ್ಷರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಪತ್ರ ಸಂಖ್ಯೆ: ಎಂಜಿಪಿ/128/2024-25, ದಿನಾಂಕ: 28/06/2024.

3. ಸನ್ಮಾನ್ಯ ಕುಲಪತಿಗಳ ಆದೇಶ ದಿನಾಂಕ: 09/07/2024

****

**ಆದೇಶ ಸಂಖ್ಯೆ: ಡಿವಿ3/71/K-FIST(L2)/2024-25, ದಿನಾಂಕ: 10-07-2024**

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಅಧ್ಯಕ್ಷರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಡಾ. ಎಂ. ಮಹೇಂದ್ರ, ಸಹ ಪ್ರಾಧ್ಯಾಪಕರು ಇವರು ಪ್ರಧಾನ ಪರಿಶೋಧಕರಾಗಿ ವಿಜಿಎಸ್‌ಟಿ ಅನುದಾನದ K-FIST (L2) ಸ್ಕೀಂ ಅಡಿಯಲ್ಲಿ ಕೈಗೊಂಡಿರುವ "Organic Chromophres with Nonlinear Optical Properties for Opto-Electronic and Sensing Applications" ಯೋಜನೆಯು ಎರಡು ವರ್ಷಗಳಾಗಿದ್ದು, ಈ ಸಂಬಂಧ ಸದರಿ ಯೋಜನೆಗೆ ಆರ್ಥಿಕ ಸಹಾಯ ಧನವಾಗಿ ರೂ. 30,00,000/-ಗಳನ್ನು ಮಂಜೂರು ಮಾಡಿರುತ್ತಾರೆ. ಅದರಲ್ಲಿ ಮೊದಲನೇ ಕಂತಿನಲ್ಲಿ ರೂ. 15,00,000/- (ರೂಪಾಯಿ ಹದಿನೈದು ಲಕ್ಷ ಮಾತ್ರ)ಗಳನ್ನು ಈ ಕೆಳಕಂಡಂತೆ* 2024-25ನೇ ಸಾಲಿನಲ್ಲಿ ಶೀರ್ಷಿಕೆವಾರು ನಿಯಮಾನುಸಾರ ವಿನಿಯೋಗಿಸಿಕೊಳ್ಳಲು ಆಡಳಿತಾತ್ಮಕ ಮಂಜೂರಾತಿ ಆದೇಶ ನೀಡಲಾಗಿದೆ.

ಮುಂದುವರೆದು ಸದರಿ ಯೋಜನೆಗೆ ನಾನ್ ರೆಕರಿಂಗ್ ಶೀರ್ಷಿಕೆಯಡಿಯಲ್ಲಿ ಮಂಜೂರಾಗಿರುವ ಉಪಕರಣವನ್ನು ಕೆಟಿಪಿಪಿ ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿ ಖರೀದಿಸಲು ಸಹ ಅನುಮತಿಸಲಾಗಿದೆ.

| *Sl. No. | Particulars | Total Qty. | Amount in Rs. |
|---|---|---|---|
| | **Non-recurring (ETP)** | | |
| 01. | Z-Scan System | 1 | 6,23,420=00 |
| 02. | Photo Detector with Mount and data recording and analysis setup (includes PC and software) | 1 | 3,07,440=00 |
| 03. | Optical Power Meter and 808 nm Laser Source | 1 | 4,19,140=00 |
| | **Total Non-recurring Grants (A)** | | **13,50,000=00** |
| | **Recurring** | | |
| 01. | Chemicals | | 60,000=00 |
| 02. | Glassware | | 30,000=00 |
| 03. | Plasticware | | - |
| 04. | Biological Specimen | | - |
| 05. | Electrical & Electronics Spare Parts | | 25,000=00 |
| 06. | Mechanical Spare Parts | | 15,000=00 |
| 07. | Contingency | | 15,000=00 |
| 08. | Book & Journals | | 5,000=00 |
| | **Total Recurring Grants (B)** | | **1,50,000=00** |
| | **Grand Total Non-Recurring & Recurring (A+B) Rs.** | | **15,00,000=00** |

ಕುಲಸಚಿವರಿಂದ ಕರಡು ಅನುಮೋದಿಸಿದೆ.

ಆದೇಶದ ಮೇರೆಗೆ,

B. Shoba 10/07/24
ಉಪಕುಲಸಚಿವ
(ಅಭಿವೃದ್ಧಿ)

ಇವರಿಗೆ,

1. ಅಧ್ಯಕ್ಷರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಡಾ. ಎಂ. ಮಹೇಂದ್ರ, ಸಹ ಪ್ರಾಧ್ಯಾಪಕರು ಮತ್ತು ಪ್ರಧಾನ ಪರಿಶೋಧಕರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಸರ್ಕಾರಿ ಲೆಕ್ಕಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಪರೀಕ್ಷಾ ಭವನ, ಮೈಸೂರು.
5. ಕಛೇರಿ ಪ್ರತಿ.

Approval Order from VGST to Initiate the Project

# ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ, 7ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001
ದೂರವಾಣಿ: 080-2203-2013, ಇ-ಮೇಲ್: visiongroup.st@gmail.com, Website: www. vgstdst.karnataka.gov.in

ಸಂಖ್ಯೆ: ವಿತಂದಾಸ/**ಜಿ.ಆರ್.ಡಿ ಸಂಖ್ಯೆ: 1133 (2022-23)**/K-FIST(L2)/2024-2025/243 ದಿನಾಂಕ: 26.07.2024

**ಇವರಿಗೆ,**
The Registrar
University of Mysore
Manasa Gangothri, Mysuru - 570 006

**ಮಾನ್ಯರೇ,**

**ವಿಷಯ:** K-FIST(L2) ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿ ಸಂಸ್ಥೆಗೆ ಮೊದಲನೇ ಕಂತಿನ ಅನುದಾನದಿಂದ ಉಪಕರಣಗಳ/ವಸ್ತುಗಳ ಖರೀದಿಗೆ (ಜಿ.ಆರ್.ಡಿ-**1133**) ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:** 1. ಸೂಚನೆ ಪತ್ರ ಸಂಖ್ಯೆ: ಕೆಸ್ಟೆಪ್ಸ್/ವಿತಂದಾಸ/K-FIST(L2)/GRD No.1133/2022-23/654 ದಿನಾಂಕ: 05.02.2024
2. ತಮ್ಮ ಸಂಸ್ಥೆಯಿಂದ PART-A ದಾಖಲೆಗಳನ್ನು ಸಲ್ಲಿಸಲಾದ ದಿನಾಂಕ:08.04.2024
3. ಮೊದಲನೇ ಕಂತಿನ ಅನುದಾನ ಬಿಡುಗಡೆಯ ಪತ್ರದ ಸಂಖ್ಯೆ: KSTePS/VGST/2022-23/K-FIST L2/ GRD-1133 / 37/2024-25/34, ದಿನಾಂಕ:13.06.2024

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ (ವಿತಂದಾಸ)ದ ವಿವಿಧ ಯೋಜನೆಗಳಲ್ಲೊಂದಾದ **K-FIST(L2)** ಕಾರ್ಯಕ್ರಮದಡಿ 2022-23ನೇ ಸಾಲಿನಲ್ಲಿ ಆಯ್ಕೆಯಾಗಿದ್ದ **ಡಾ. ಮಹೇಂದ್ರ ಎಂ, ಸಹ ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು** ರವರು ಸಲ್ಲಿಸಿದ್ದ **"Organic Chromophores with Nonlinear Optical Properties for Opto-electronic and Sensing Applications"** ಶೀರ್ಷಿಕೆಯ ಪ್ರಸ್ತಾವನೆಗೆ **(ಜಿ.ಆರ್.ಡಿ-1133)** ಮೊದಲನೇ ಕಂತಿನ ಅನುದಾನವಾಗಿ **ರೂ. 15,00,000/-** ಗಳನ್ನು RTGS ಮೂಲಕ ಬಿಡುಗಡೆ ಮಾಡಲಾಗಿರುವುದು ಸರಿಯಷ್ಟೆ.

ಈ ನಿಟ್ಟಿನಲ್ಲಿ, ವಿತಂದಾಸ ವಿಮರ್ಶಾ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಮತ್ತು ಯೋಜನಾ ಸಂಯೋಜಕರು ಮೊದಲನೇ ಕಂತಿನ ಅನುದಾನಕ್ಕೆ ಸಲ್ಲಿಸಿದ್ದ PART-A ದಾಖಲೆಗೆ ಅನುಗುಣವಾಗಿ ರೆಕರಿಂಗ್ (Recurring) ಮತ್ತು ನಾನ್-ರೆಕರಿಂಗ್ (Non-recurring) ಉಪಕರಣಗಳ/ವಸ್ತುಗಳ ಖರೀದಿಗೆ ಅನುಮೋದನೆಯನ್ನು ಈ ಕೆಳಕಂಡಂತೆ ನೀಡಲಾಗಿದೆ:

| ಕ್ರ. ಸಂ. | ವಿವರಗಳು<br>ನಾನ್- ರೆಕರಿಂಗ್ | ಒಟ್ಟು ಪ್ರಮಾಣ | ವಿತಂದಾಸದಿಂದ ಅನುಮೋದನೆ ನೀಡಿದ ಮೊತ್ತ (ರೂ. ಗಳಲ್ಲಿ) |
|---|---|---|---|
| 1 | Z-scan system | 01 | 6,23,420.00 |
| 2 | Photo detector with mount and data recording and analysis setup (includes PC and software) | 01 | 3,07,440.00 |
| 3 | Optical power meter and 808nm laser source | 01 | 4,19,140.00 |
| | **ಒಟ್ಟು ನಾನ್- ರೆಕರಿಂಗ್ ಮೊತ್ತ (A)** | | **13,50,000.00** |
| | **ರೆಕರಿಂಗ್ ಪಟ್ಟಿ** | | |
| 1 | Chemicals | | 60,000.00 |
| 2 | Glassware | | 30,000.00 |
| 3 | Electricals and Electronics Spare parts | | 25,000.00 |
| 4 | Mechanical Spare Parts | | 15,000.00 |
| 5 | Contingency | | 15,000.00 |
| 6 | Books and Journals | | 5,000.00 |
| | **ಒಟ್ಟು ರೆಕರಿಂಗ್ ಮೊತ್ತ (B)** | | **1,50,000.00** |
| | **ಒಟ್ಟು ನಾನ್- ರೆಕರಿಂಗ್ ಮತ್ತು ರೆಕರಿಂಗ್ ಮೊತ್ತ (A+B)** | | **15,00,000.00** |

**ಯೋಜನೆಯ ಅನುಷ್ಠಾನಕ್ಕೆ ಅನುದಾನವನ್ನು ಬಳಸುವಾಗ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವುದು:**

1. ಉದ್ದೇಶಿತ ಯೋಜನೆ/ಕಾರ್ಯಕ್ರಮವನ್ನು ತಮ್ಮ ಸಂಸ್ಥೆಯಿಂದಾಗಲೀ ಅಥವಾ ಬೇರೆ ಸಂಸ್ಥೆಗಳ ಮುಖಾಂತರವಾಗಲೀ ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ - 1999 ಮತ್ತು ನಿಯಮಗಳು 2000 (KTPP Act - 1999 & Rules - 2000), ಕರ್ನಾಟಕ ಆರ್ಥಿಕ ಸಂಹಿತೆ (KFC) ಹಾಗೂ ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ (Strictly) ಮತ್ತು ಕಡ್ಡಾಯವಾಗಿ (Compulsorily) ಅನುಸರಿಸುವುದು/ ಪಾಲಿಸುವುದು.

2. ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಿಡುಗಡೆಯಾಗುವ ಅನುದಾನದಿಂದ ಅನುಮೋದಿತ ಪಾರ್ಟ್-ಎ (Part-A) ನಲ್ಲಿ ನಮೂದಿತವಾಗಿರುವ ಉಪಕರಣಗಳು / ವಸ್ತುಗಳನ್ನು ಮಾತ್ರ ಖರೀದಿಸುವುದು. ಇದರಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.

3. ರೂ.1.00 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಬೆಲೆಯ ಉಪಕರಣ/ವಸ್ತುಗಳನ್ನು ಕಡ್ಡಾಯವಾಗಿ (Compulsory) ಇ-ಟೆಂಡರ್ ನಲ್ಲಿ **"ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್" (Karnataka Public Procurement Portal)** ಮುಖಾಂತರ ಖರೀದಿಸುವುದು. ರೂ. 1.00 ಲಕ್ಷಕ್ಕಿಂತ ಕಡಿಮೆ ಬೆಲೆಯ ಉಪಕರಣಗಳನ್ನು ಮ್ಯಾನ್ಯುಯಲ್ ಟೆಂಡರ್ (Manual Tender) ಮೂಲಕ ಖರೀದಿಸಬಹುದು.

4. ಸದರಿ ಯೋಜನೆಯಡಿ ಖರೀದಿಸಲಾಗುವ ಎಲ್ಲ ಉಪಕರಣ/ವಸ್ತುಗಳ ಜಿ. ಎಸ್. ಟಿ. ತೆರಿಗೆಯನ್ನು ಒಳಗೊಂಡ ಬಿಲ್ಲುಗಳು **(GST Tax Invoice bills)** ಹಾಗೂ ಟೆಂಡರ್ ಪ್ರಕ್ರಿಯೆಯ ದಾಖಲೆಗಳನ್ನು ವರದಿ ಮತ್ತು ಉಪಯೋಗಿತಾ ಪ್ರಮಾಣಪತ್ರದ ಜೊತೆ ಎರಡನೇ ಕಂತಿನ ಅನುದಾನದ ಬಿಡುಗಡೆಗೆ ಮುನ್ನ ವಿತಂದಾಸ ಕಛೇರಿಗೆ ತಪ್ಪದೆ ಸಲ್ಲಿಸುವುದು.

5. ಫಲಾನುಭವಿ ಸಂಸ್ಥೆಗೆ ಬಿಡುಗಡೆ ಮಾಡುವ ಅನುದಾನವನ್ನು ಅಗತ್ಯಕ್ಕೆ ಅನುಗುಣವಾಗಿ ನೀಡಲಾದ ಉದ್ದೇಶಕ್ಕೆ ಮಾತ್ರ ಬಳಸುವುದು ಹಾಗೂ ಸದರಿ ಅನುದಾನಕ್ಕೆ ಬರುವ ಬ್ಯಾಂಕ್ ಬಡ್ಡಿ ಮೊತ್ತವನ್ನು ಯಾವುದೇ ಕಾರಣಕ್ಕೂ ಉದ್ದೇಶಿತ ಯೋಜನೆಯ ಅನುಷ್ಠಾನಕ್ಕೆ ಬಳಸಿಕೊಳ್ಳಲು ಅನುಮತಿ/ ಅವಕಾಶವಿರುವುದಿಲ್ಲ. ಈ ಬಡ್ಡಿಯ ಮೊತ್ತವನ್ನು ಉಪಯೋಗಿತ ಪ್ರಮಾಣಪತ್ರದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ರವರ ಹೆಸರಿನಲ್ಲಿ ಚೆಕ್/ ಡಿ.ಡಿ. ಮೂಲಕ ಹಿಂತಿರುಗಿಸುವುದು.

6. ತಮ್ಮ ಸಂಸ್ಥೆಗೆ ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಬಿಡುಗಡೆಯಾಗಿರುವ ಅನುದಾನದಲ್ಲಿ ಬಳಕೆಯಾಗದೆ ಉಳಿಕೆಯಾಗುವ ಮೊತ್ತವನ್ನು ಮುಂದಿನ ಕಂತಿನ ಅನುದಾನದಲ್ಲಿ ಕಡಿತಗೊಳಿಸಿ ಉಳಿದ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಅದರೆ, ಅದು ಯೋಜನೆಯ ಕೊನೆಯ ಕಂತು ಆಗಿದ್ದಲ್ಲಿ ಉಳಿಕೆಯಾಗುವ ಮೊತ್ತವನ್ನು ವಿತಂದಾಸಕ್ಕೆ ಹಿಂತಿರುಗಿಸುವುದು.

7. ಯೋಜನೆಯನ್ನು ಕಾರ್ಯಗತಗೊಳಿಸುವಾಗ ಸರ್ಕಾರದ ಎಲ್ಲಾ ಮಾರ್ಗಸೂಚಿಗಳು, ನಿಯಮಗಳು ಮತ್ತು ಷರತ್ತುಗಳನ್ನು ತಪ್ಪದೇ ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು.

8. ಯೋಜನೆಯ ಅನುಷ್ಠಾನದ ಯಾವುದೇ ಹಂತದಲ್ಲಿ ಯಾವುದೇ ಮಾಹಿತಿಯ ಅಗತ್ಯವಿದ್ದಲ್ಲಿ, ವಿತಂದಾಸ ಕಛೇರಿಯನ್ನು ಸಂಪರ್ಕಿಸಬಹುದು.

ತಮ್ಮ ವಿಶ್ವಾಸಿ,

RNVenkatesha 26/07/2024

ಆರ್.ಟಿ. ವೆಂಕಟೇಶ

ವಿಜ್ಞಾನಿ-ಎಸ್.ಇ, ಕೆಸ್ಟೆಪ್ಸ್ /ಸಂಯೋಜಕರು, ವಿತಂದಾಸ

**ಪ್ರತಿ:** Dr. Mahendra M, Associate Professor, Department of studies in Physics, University of Mysore, Manasa Gangothri, Mysuru - 570 006